# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018. ದೂರವಾಣಿ: 080–26701303


## ೩೧.೦೮.೨೦೧೨ರಂದು ನಡೆದ ಪ್ರಶಾಸನ ಸಮಿತಿ ೬ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿಯ ೬ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಆಗಸ್ಟ್ ೩೧, ೨೦೧೨ರ ಶುಕ್ರವಾರ ಬೆಳಿಗ್ಗೆ ೧೧.೩೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀಮತಿ ವಿ.ಎಚ್. ಕಮಲಾ ಬಾಯಿ,** ಉಪ ನಿರ್ದೇಶಕರು<br>ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಬೆಂಗಳೂರು | ಸದಸ್ಯರು |
| ೩. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |
| ೪. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೫. | **ಡಾ. ಎಚ್.ಆರ್. ವಿಶ್ವಾಸ್,** ಮಂಗಳೂರು | ಸದಸ್ಯರು |
| ೬. | **ಡಾ. ಪಿ.ಬಿ. ಸಂತಪ್ಪನವರ,** ಗುಲಬರ್ಗಾ | ಸದಸ್ಯರು |
| ೭. | **ಶ್ರೀ ಜಿ. ಹನುಮಂತರಾಯಪ್ಪ,** ತುಮಕೂರು | ಸದಸ್ಯರು |
| ೮. | **ಡಾ. ಟಿ.ಎಸ್. ಸತ್ಯವತಿ,** ಬೆಂಗಳೂರು | ಸದಸ್ಯರು |
| ೯. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೧೦. | **ಡಾ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೧೧. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಪ್ರಧಾನ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಸರ್ಕಾರದ ಕಾರ್ಯದರ್ಶಿಗಳು,** ಕಂದಾಯ ಇಲಾಖೆ, (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೫. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೬. | **ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,** ಕವಲೇದುರ್ಗ | ಸದಸ್ಯರು |
| ೭. | **ಶ್ರೀ ಡಿ. ಸುರೇಂದ್ರಕುಮಾರ್,** ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಾಸನ ಸಮಿತಿ ಐದನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 16.06.2011ರಂದು ನಡೆದ ಪ್ರಶಾಸನ ಸಮಿತಿ ಐದನೇ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 3ಕ್ಕೆ** ಸಂಬಂಧಿಸಿದಂತೆ ಬೋಧಕ–ಬೋಧಕೇತರ ಹುದ್ದೆಗಳಿಗೆ ದಿನಾಂಕ: 16.07.2012ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. **ವಿಷಯ ಸಂಖ್ಯೆ 4ಕ್ಕೆ** ಸಂಬಂಧಿಸಿದಂತೆ ಎಂ.ಫಿಲ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ರೂ. 1000/–ಗಳನ್ನು ನೀಡಲು ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 5ಕ್ಕೆ** ಸಂಬಂಧಿಸಿದಂತೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ ಹುದ್ದೆಗಳನ್ನು ತುಂಬುವ ಸಂಬಂಧವಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ. **ವಿಷಯ ಸಂಖ್ಯೆ 6ಕ್ಕೆ** ಸಂಬಂಧಿಸಿದಂತೆ ದೂರಶಿಕ್ಷಣ ಪ್ರಾರಂಭಿಸುವ ಆತ್ರೇಯ ಸಂಸ್ಥೆಯ ವಿಷಯವಾಗಿ ಶಿಕ್ಷಣತಜ್ಞರನ್ನೊಳಗೊಂಡ ಸಮಿತಿಯನ್ನು ರಚಿಸಿ ಸಭೆ ಕರೆದು ನಡಾವಳಿಯನ್ನು ಈ ಸಭೆಗೆ ಮಂಡಿಸಲಾಗಿದೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳಲ್ಲಿ ವಿಷಯ ಸಂಖ್ಯೆ 2ಕ್ಕೆ** ಸಂಬಂಧಿಸಿದಂತೆ ಸಭೆಗಳನ್ನು ನಡೆಸಿ ಷರತ್ತು/ಬೇಡಿಕೆಗಳನ್ನು ಇಟ್ಟಿರುವ ಅಧ್ಯಾಪಕರ ವಿವರಗಳನ್ನೊಳಗೊಂಡ ಸೂಕ್ತ ಪ್ರಸ್ತಾವನೆಯೊಂದನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ.

**ವಿಷಯ ಸಂಖ್ಯೆ 3**ಕ್ಕೆ ಸಂಬಂಧಿಸಿದಂತೆ ದಿನಾಂಕ: 10.07.2012ರಂದು ನಡೆದ ಸಮಿತಿ ಸಭೆಯ ನಡಾವಳಿಯನ್ನು ಅವಗಾಹನೆಗಾಗಿ ಮಂಡಿಸಿದೆ. **ವಿಷಯ ಸಂಖ್ಯೆ 4**ಕ್ಕೆ ಸಂಬಂಧಿಸಿದಂತೆ ಕಾನೂನು ಸಲಹೆಗಾರರಾದ ಶ್ರೀ ಸಿ. ವೆಂಕಟೇಶ್ ಅವರ ಮಾಸಿಕ ಭತ್ಯೆಯನ್ನು ರೂ. 5000/–ಗಳಿಗೆ ಏರಿಸಿ ನೀಡಲಾಗಿದೆ.

ನಿರ್ಣಯ: **ಸಭೆಯು ಅನುಪಾಲನಾ ವರದಿಯನ್ನು ಗಮನಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 2: ದಿನಾಂಕ: 25.08.2012ರಂದು ನಡೆದ ಹಣಕಾಸು ಸಮಿತಿ ಆರನೇ ಸಭೆಯ ನಡಾವಳಿ ಅನುಮೋದನೆ ಬಗೆಗೆ.**

ಟಿಪ್ಪಣಿ: ಹಣಕಾಸು ಸಮಿತಿಯ ಆರನೇ ಸಭೆಯು ದಿನಾಂಕ: 25.08.2012ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸಿದೆ.

**ಏಪ್ರಿಲ್ ತಿಂಗಳ ಆಯ–ವ್ಯಯದ ವಿವರ**

| | |
|---|---|
| ಏಪ್ರಿಲ್ ತಿಂಗಳ ವಿವರ (01.04.2012ಕ್ಕೆ ಇದ್ದಂತೆ) | |
| ಕುಲಪತಿಗಳ ಉಳಿತಾಯ ಖಾತೆ ಆರಂಭಿಕ ಶಿಲ್ಕು | 5,48,71,833.00 |
| ಹಣಕಾಸು ಅಧಿಕಾರಿಗಳ ಉಳಿತಾಯ ಖಾತೆ ಪ್ರಾರಂಭಿಕ ಶಿಲ್ಕು | 27,68,146.00 |
| ಒಟ್ಟು ಜಮೆ | 1,10,97,203.00 |
| **ಒಟ್ಟು ಮೊತ್ತ** | **6,86,77,182.00** |
| ಪಾವತಿಗಳು | 2,29,87,170.00 |
| (ಸಿಬ್ಬಂದಿಗಳ ವೇತನ, ಅನುದಾನಿತ ಕಾಲೇಜು ಮತ್ತು ಪಾಠಶಾಲಾ ಶಿಕ್ಷಕರ ವೇತನ, ತೆರಿಗೆ ಪಾವತಿ ವೆಚ್ಚ, ಪರೀಕ್ಷಾ ಕಾರ್ಯದ ವೆಚ್ಚ, ಎಐಯು ಶುಲ್ಕ, ವಿಚಾರಸಂಕಿರಣದ ವೆಚ್ಚ, ವಿಶೇಷ ಘಟಕ ಯೋಜನೆಯ ಅನುದಾನದ ಮೊತ್ತವನ್ನು ಠೇವಣಿಸಿದ ವೆಚ್ಚ, ಅಭಿವೃದ್ಧಿ/ಆಡಳಿತಾತ್ಮಕ ವೆಚ್ಚಗಳು) | |
| **ನಗದು ಪುಸ್ತಕದ ಅಂತಿಮ ಶಿಲ್ಕು (30.04.2012ಕ್ಕೆ ಇದ್ದಂತೆ)** | **4,56,90,012.00** |

**ಮೇ ತಿಂಗಳ ಆಯ–ವ್ಯಯದ ವಿವರ**

| | |
|---|---|
| ಮೇ ತಿಂಗಳ ವಿವರ (01.05.2012ಕ್ಕೆ ಇದ್ದಂತೆ) | |
| ಕುಲಪತಿಗಳ ಖಾತೆಯ ಆರಂಭಿಕ ಶಿಲ್ಕು | 4,21,63,726.00 |
| ಹಣಕಾಸು ಅಧಿಕಾರಿಗಳ ಖಾತೆಯ ಆರಂಭಿಕ ಶಿಲ್ಕು | 35,26,286.00 |
| ಒಟ್ಟು ಜಮೆ | 4,18,57,705.00 |
| **ಒಟ್ಟು ಮೊತ್ತ** | **8,75,47,717.00** |
| ಪಾವತಿಗಳು | 4,47,78,973.00 |
| (ಸಿಬ್ಬಂದಿಗಳ ವೇತನ, ಅನುದಾನಿತ ಕಾಲೇಜು ಮತ್ತು ಪಾಠಶಾಲಾ ಶಿಕ್ಷಕರ ವೇತನ, ತುಟ್ಟಿಭತ್ಯೆ ಬಾಕಿ ಹಾಗೂ ತೆರಿಗೆ ಪಾವತಿ, ಪರೀಕ್ಷಾ ಕಾರ್ಯದ ವೆಚ್ಚ, ವಿಶ್ವವಿದ್ಯಾಲಯದ ಜಾಲತಾಣದ ವೆಚ್ಚ, ನಿಶ್ಚಿತ ಠೇವಣಿ, ಅಭಿವೃದ್ಧಿ/ಆಡಳಿತಾತ್ಮಕ ವೆಚ್ಚಗಳು) | |
| **ನಗದು ಪುಸ್ತಕದ ಅಂತಿಮ ಶಿಲ್ಕು** | **4,27,68,744.00** |

**ಜೂನ್ ತಿಂಗಳ ಆಯ–ವ್ಯಯದ ವಿವರ**

| | |
|---|---|
| ಜೂನ್ ತಿಂಗಳ ವಿವರ (01.06.2012ಕ್ಕೆ ಇದ್ದಂತೆ) | |
| ಕುಲಪತಿಗಳ ಖಾತೆಯ ಆರಂಭಿಕ ಶಿಲ್ಕು | 3,297.00 |
| ಹಣಕಾಸು ಅಧಿಕಾರಿಗಳ ಖಾತೆಯ ಆರಂಭಿಕ ಶಿಲ್ಕು | 4,27,65,447.00 |
| ಒಟ್ಟು ಜಮೆ | 83,00,358.00 |
| **ಒಟ್ಟು ಮೊತ್ತ** | **5,10,69,102.00** |
| ಪಾವತಿಗಳು | 3,72,78,683.00 |
| (ಸಿಬ್ಬಂದಿಗಳ ವೇತನ, ಅನುದಾನಿತ ಸಂಸ್ಕೃತ ಕಾಲೇಜು ಮತ್ತು ಪಾಠಶಾಲಾ ಶಿಕ್ಷಕರ ವೇತನ ಮತ್ತು ತೆರಿಗೆ ಪಾವತಿ, ಸ್ನಾತಕಪೂರ್ವ ದಿಕ್ಷಾಂತ ಸಮಾರೋಹ ಸಮಾರಂಭದ ಖರ್ಚು, ಮೈಸೂರು ಘಟಕ ಕಾಲೇಜಿನ ತೆರಿಗೆ ಪಾವತಿ, ಪಠ್ಯಪುಸ್ತಕ ಖರೀದಿ, ಅಭಿವೃದ್ಧಿ/ಆಡಳಿತಾತ್ಮಕ ವೆಚ್ಚಗಳು) | |
| **ನಗದು ಪುಸ್ತಕದ ಅಂತಿಮ ಶಿಲ್ಕು** | **1,37,90,419.00** |

ನಿರ್ಣಯ: **ಸಭೆಯು ದಿನಾಂಕ: 25.08.2012ರಂದು ನಡೆದ ಹಣಕಾಸು ಸಮಿತಿ ಸಭೆಯ ಏಪ್ರಿಲ್, ಮೇ ಮತ್ತು ಜೂನ್ ತಿಂಗಳ ಆಯ–ವ್ಯಯ ವಿವರಗಳನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 3: ಸಂಸ್ಕೃತ ವಿಕಿಪೀಡಿಯಾ ಯೋಜನೆಯ ಅನುಷ್ಠಾನ ಉಪಸಮಿತಿ ಸಭೆಯ ವರದಿಯ ಬಗೆಗೆ.**

ಟಿಪ್ಪಣಿ: ದಿನಾಂಕ 10.07.2012ರಂದು ನಡೆದ ಸಮಿತಿ ಸಭೆಯ ಪ್ರಮುಖ ಅಂಶಗಳು – ಭಾಷಾ ಸಂಶೋಧನ ಕೇಂದ್ರದ ಸ್ಥಾಪನೆ. ಈ ಕೇಂದ್ರದ ನಿರ್ವಹಣೆಗಳು: 1. ವಿಶ್ವವಿದ್ಯಾಲಯದ ಜಾಲತಾಣ ನಿರ್ವಹಣೆ; 2. ಇ–ಗ್ರಂಥಾಲಯ ನಿರ್ವಹಣೆ; 3. ಸಂಸ್ಕೃತ ವಿಕಿಪೀಡಿಯಾ ಯೋಜನೆ; 4. Inflibnet ಯೋಜನೆ (ವಿಶ್ವವಿದ್ಯಾಲಯದ ಧನಾಯೋಗದ ವಿಶೇಷ

ಗ್ರಂಥಾಲಯ ಸೂಚನಾ ಸಂಗ್ರಹ); 5. ವಿಶ್ವವಿದ್ಯಾಲಯದ E-Learning ವ್ಯವಸ್ಥೆ; 6. ವಿಶ್ವವಿದ್ಯಾಲಯ ಹಾಗೂ ಇತರ ಸಂಸ್ಥೆಗಳ ನೆಟ್‌ವರ್ಕಿಂಗ್ ವ್ಯವಸ್ಥೆ ಮತ್ತು ತನ್ಮೂಲಕ ಅನೇಕ ಕಾರ್ಯಕ್ರಮಗಳ ಮೂಲಕ ಜ್ಞಾನವಿನಿಮಯ; 7. ಸಂಗಣಕೀಯ ಭಾಷಾ ವಿಶ್ಲೇಷಣೆಯ ಕ್ಷೇತ್ರದಲ್ಲಿ ಸಂಶೋಧನೆ; 8. ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರುಗಳಿಗೆ ಸಂಗಣಕ ಶಿಕ್ಷಣ –ಈ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಅನುಭವಿ ತಜ್ಞ ಪ್ರಾಧ್ಯಾಪಕರ ನಿರ್ದೇಶನದಲ್ಲಿ ಕೇಂದ್ರ ಒಂದನ್ನು ತೆರೆಯುವುದು. ಈ ಕೇಂದ್ರಕ್ಕೆ ಮೂರು ಜನ ಯೋಜನಾ ಸಹಾಯಕರನ್ನು, ಒಬ್ಬ ಕಛೇರಿ ಸಹಾಯಕರನ್ನು ಹಾಗೂ ಒಬ್ಬ 'ಡಿ' ಗ್ರೂಪ್ ನೌಕರನನ್ನು ಒದಗಿಸುವುದು. ಇದಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿತು. ಇದರ ಅನುಷ್ಠಾನಕ್ಕಾಗಿ ತಗಲುವ ವೆಚ್ಚವನ್ನು 2013–14ನೇ ಸಾಲಿನ ಶೈಕ್ಷಣಿಕ ವರ್ಷದ ಸರ್ಕಾರಿ ಆಯ–ವ್ಯಯದಲ್ಲಿ ಮಂಡಿಸುವಂತೆ ಸೂಕ್ತ ರೀತಿಯ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಿಕೊಡಲು ಸಭೆಯು ನಿರ್ಣಯಿಸಿತು.**

**ವಿಷಯ 4: 2013–14ನೇ ಸಾಲಿನಿಂದ ಆರಂಭಿಸಲು ತೀರ್ಮಾನಿಸಿರುವ ಸಂಸ್ಕೃತ ದೂರಶಿಕ್ಷಣ ತರಗತಿಗಳನ್ನು ಆರಂಭಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ 16.06.2012 ರಂದು ನಡೆದ ಪ್ರಶಾಸನ ಸಮಿತಿ ಸಭೆಯಲ್ಲಿ ನಿರ್ಣಯಿಸಿದಂತೆ ದಿನಾಂಕ 13.08.2012 ರಂದು ನಡೆದ ಸಭೆಯ ಪ್ರಮುಖ ಅಂಶಗಳು.

1. ರಾಜ್ಯದ IGNOU/KSO ಮಾದರಿಯಲ್ಲಿ ಎಲ್ಲಾ ಸಂಸ್ಕೃತಾಭಿಮಾನಿಗಳಿಗೆ ಲಭ್ಯವಾಗುವಂತೆ ದೂರ–ಬಾಹ್ಯ–ಮುಕ್ತ ಅನೌಪಚಾರಿಕ ಶಿಕ್ಷಣ ಕಾರ್ಯಕ್ರಮಗಳನ್ನು ಸಂಸ್ಕೃತ ವಿಶ್ವವಿದ್ಯಾಲಯವು ಆರಂಭಿಸುವುದು.
2. ಈ ಶಿಕ್ಷಣಕ್ಕೆ ಸಂಬಂಧಿಸಿದಂತೆ, ದೂರಶಿಕ್ಷಣ ಪರಿನಿಯಮಗಳನ್ನು ರಚಿಸಿ, ಸೂಕ್ತ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯುವುದು.
3. ಆತ್ರೇಯ ಶಿಕ್ಷಣ ಸಂಸ್ಥೆಯು ನೀಡಿರುವ ಪ್ರಸ್ತಾವನೆಯನ್ನು ಒಪ್ಪಿಕೊಂಡು 5 ವರ್ಷಗಳ ಕಾಲ ಒಪ್ಪಂದ ಮಾಡಿಕೊಳ್ಳುವುದು.
4. ಪ್ರತಿ ತಿಂಗಳು ಈ ಒಪ್ಪಂದದ ಅಡಿಯಲ್ಲಿ ಕೈಗೊಂಡ ಕಾರ್ಯಗಳು ಮತ್ತು ಅವುಗಳ ಪ್ರಗತಿಯನ್ನು ಪರಿಶೀಲಿಸಿ ಕುಲಪತಿಗಳಿಗೆ ವರದಿಯನ್ನು ನೀಡಲು ಪರಿಶೀಲನಾ ಸಮಿಯನ್ನು ರಚಿಸುವುದು.
5. ಈ ಶೈಕ್ಷಣಿಕ ಕಾರ್ಯಕ್ರಮಗಳ ಪಠ್ಯಕ್ರಮಗಳನ್ನು ರಚಿಸಿ, ಸೂಕ್ತ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯುವುದು.
6. ಶೈಕ್ಷಣಿಕ ವರ್ಷದ ಕೊನೆಯಲ್ಲಿ ವಿಶ್ವವಿದ್ಯಾಲಯವು ಪರೀಕ್ಷೆಯನ್ನು ಮಾಡಿ, ಪದವಿಯನ್ನು ನೀಡುವುದು.
7. ಈ ಎಲ್ಲಾ ಯೋಜನೆಯ ಆಡಳಿತಾತ್ಮಕ ನಿರ್ವಹಣೆಯ ವಿಷಯದಲ್ಲಿ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ನಿಯಮಗಳನ್ನು ರೂಪಿಸುವುದು –ಈ ಎಲ್ಲಾ ಅಂಶಗಳನ್ನು ಪ್ರಶಾಸನ ಸಮಿತಿಯ ಒಪ್ಪಿಗೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಚರ್ಚಿಸಿ ಈ ಕೆಳಕಂಡಂತೆ ಸಮಿತಿಯೊಂದನ್ನು ರಚಿಸಿ ಮುಂದಿನ ಕ್ರಮಗಳನ್ನು ನಡೆಸಲು ಅನುಮೋದಿಸಿತು.**

| | | |
|---|---|---|
| 1. | **ಕುಲಪತಿಗಳು,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ | ಅಧ್ಯಕ್ಷರು |
| 2. | **ಡಾ. ಎಸ್.ಆರ್. ಲೀಲಾ,** ಪ್ರಶಾಸನ ಸಮಿತಿ ಸದಸ್ಯರು, ಕ.ಸಂ.ವಿ. | ಸದಸ್ಯರು |
| 3. | **ವಿದ್ವಾನ್ ಎ. ಹರಿದಾಸ ಭಟ್,** ಪ್ರಶಿಕ್ಷಣ ಪರಿಷತ್ ಸದಸ್ಯರು, ಕ.ಸಂ.ವಿ. | ಸದಸ್ಯರು |
| 4. | **ಡಾ. ಮುಡಂಬಡಿತ್ತಾಯ,** ಪಠ್ಯಪುಸ್ತಕ ಸಮಿತಿ ಸಂಯೋಜಕರು, DSERT, ಕರ್ನಾಟಕ ಸರ್ಕಾರ | ಸದಸ್ಯರು |
| 5. | **ಡೀನ್, ಭಾಷಾ ನಿಕಾಯ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ | ಸದಸ್ಯರು |
| 6. | **ಡೀನ್,** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು | ಸದಸ್ಯರು |
| 7. | **ಪ್ರಾದೇಶಿಕ ನಿರ್ದೇಶಕರು,** IGNOU | ಸದಸ್ಯರು |
| 8. | **ಕುಲಸಚಿವರು,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ | ಸದಸ್ಯ ಕಾರ್ಯದರ್ಶಿಗಳು |

**ವಿಷಯ 5: ಜ್ಯೋತಿಷ್ಯ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ತರಗತಿಗೆ ಪಠ್ಯವಿಷಯ ಹಾಗೂ ಪ್ರವೇಶ ನಿಯಮಾವಳಿ ರೂಪಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ 30.06.2012 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ನಿರ್ಣಯದಂತೆ ದಿನಾಂಕ 27.07.2012 ರಂದು ನಡೆದ ಉಪಸಮಿತಿ ಸಭೆಯ ಪ್ರಮುಖ ಅಂಶಗಳು ಹೀಗಿವೆ:

1. ಆರು ತಿಂಗಳ ಅವಧಿಯ ಪ್ರಾಮಾಣಿಕ ಶಿಕ್ಷಣ (Certificate Course); 2. ಒಂದು ವರ್ಷದ ಪ್ರಾಯೋಗಿಕ ಶಿಕ್ಷಣ (Diploma Course); 3. ಮುಂದಿನ ದಿನಗಳಲ್ಲಿ ಯು.ಜಿ. ಮತ್ತು ಪಿ.ಜಿ. ಕೋರ್ಸ್; 4. ಪಾಠ್ಯಕ್ರಮಗಳ ಏಕರೂಪತೆ; 5. ಶುಲ್ಕ, ಪ್ರವೇಶನಿಯಮ, ಅಧ್ಯಯನ ಕೇಂದ್ರಗಳಲ್ಲಿ ಏಕರೂಪತೆ –ಈ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಪರಿನಿಯಮಗಳನ್ನು ರಚಿಸಿ ಶಿಕ್ಷಣಕ್ಕೆ ಅವಕಾಶ ಕಲ್ಪಿಸುವುದು. ಈ ಶಿಕ್ಷಣವನ್ನು 2013–14ನೇ ಸಾಲಿನಿಂದ ಜಾರಿಗೆ ತರುವುದು. ಮೇಲ್ಕಂಡ ಈ ಎಲ್ಲಾ ಅಂಶಗಳನ್ನು ಸಭೆಯು ಚರ್ಚಿಸಿ, ಸೂಕ್ತ ಪ್ರಾಧಿಕಾರಗಳಿಂದ ಅನುಮತಿ ಪಡೆಯುವ ಮೂಲಕ ಮುಂದಿನ ಕ್ರಮವನ್ನು ಜರುಗಿಸಲು ಸಭೆಯು ತೀರ್ಮಾನಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿತು. 2013–14ರಿಂದ ವಿಶ್ವವಿದ್ಯಾಲಯವು ಸೂಕ್ತ ರೀತಿಯಿಂದ ಜಾರಿಗೆ ತರಬಹುದೆಂದು ನಿರ್ಣಯಿಸಿತು.**

**ವಿಷಯ 6: ಸಂಸ್ಕೃತ ಪ್ರಥಮಾ, ಕಾವ್ಯ ಹಾಗೂ ಸಾಹಿತ್ಯ ತರಗತಿಗಳ ಅಧ್ಯಯನ ಅವಧಿ ಮತ್ತು 2013–14ನೇ ಶೈಕ್ಷಣಿಕ ವರ್ಷದಿಂದ ನೂತನ ಪಠ್ಯಕ್ರಮವನ್ನು ರಚಿಸಿ ಅನುಷ್ಠಾನಗೊಳಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ 30.06.2012 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ಸಭೆಯ ನಿರ್ಣಯದಂತೆ ದಿನಾಂಕ 06.08.2012 ರಂದು ನಡೆದ ಪಠ್ಯಪುಸ್ತಕ ರಚನಾ ಸಮಿತಿ ಸಭೆಯ ಪ್ರಮುಖ ಅಂಶಗಳು.

1. ಪಠ್ಯಪುಸ್ತಕ ರಚನಾ ಉಪ ಸಮಿತಿಯನ್ನು ರಚಿಸುವುದು.
2. ಪಠ್ಯಪುಸ್ತಕ ರಚನಾ ಕಾರ್ಯಕ್ಕಾಗಿ ಸಮರ್ಥ ಬೋಧಕ–ಲೇಖಕ ವಿದ್ವಾಂಸರನ್ನು ಉಪಸಮಿತಿಗಳ ಸದಸ್ಯರನ್ನಾಗಿ ನೇಮಿಸುವುದು.
3. ಈ ಉಪಸಮಿತಿಗಳು ಪಠ್ಯಪುಸ್ತಕ ಮಾರ್ಗದರ್ಶನ ಸಮಿತಿಯ ಅಡಿಯಲ್ಲಿ ಕೆಲಸ ನಿರ್ವಹಿಸುವುದು.
4. 2013–14ನೇ ಸಾಲಿಗಾಗಿ ಪಠ್ಯಪುಸ್ತಕಗಳನ್ನು ಮುದ್ರಿಸಿ ನೀಡುವುದು. ಈ ಎಲ್ಲಾ ಅಂಶಗಳನ್ನು ಪ್ರಶಾಸನ ಸಮಿತಿಯ ಒಪ್ಪಿಗೆಗಾಗಿ ಮಂಡಿಸಿದೆ.

ನಿರ್ಣಯ: **ವಿಶ್ವವಿದ್ಯಾಲಯವು ತನ್ನ ಕ್ರಿಯಾಯೋಜನೆಯ ಅನುದಾನದಲ್ಲಿ ಪಠ್ಯಪುಸ್ತಕವನ್ನು ರಚಿಸಬಹುದೆಂದೂ ಇದಕ್ಕೆ ಸಂಬಂಧಿಸಿದಂತೆ ಇನ್ನಿತರ ಮುದ್ರಣ, ಲೇಖಕರ ಸಂಭಾವನೆ ಮೊದಲಾದವುಗಳಿಗೆ ತಗಲುವ 50 ಲಕ್ಷ ರೂ.ಗಳ ವೆಚ್ಚವನ್ನು ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯೊಡನೆ ಕಳುಹಿಸಬಹುದೆಂದೂ ಸಭೆಯು ನಿರ್ಣಯಿಸಿತು.**

**ವಿಷಯ 7: ಅರಕಲಗೂಡಿನ ಸಂಸ್ಕೃತ ವಾಗ್ವರ್ಧಿನಿ ಪಾಠಶಾಲೆಯ ಮಾನ್ಯತೆಗೆ ಸಂಬಂಧಿಸಿದಂತೆ ತ್ರಿಸದಸ್ಯ ಸಮಿತಿಯ ವರದಿ.**

ಟಿಪ್ಪಣಿ: ಈ ಮೇಲ್ಕಂಡ ಸಂಸ್ಕೃತ ಪಾಠಶಾಲೆಯ ನೋಂದಣಿಗೆ ಸಂಬಂಧಿಸಿದಂತೆ ವಿವಾದದಿಂದಾಗಿ ಈ ಸಂಸ್ಥೆಯ ಮಾನ್ಯತೆಯನ್ನು ರದ್ದುಪಡಿಸಲಾಗಿತ್ತು. ಪ್ರಸಕ್ತ ಈ ವರ್ಷದಲ್ಲಿ ಆಡಳಿತ ಮಂಡಳಿಯು ಶಾಲೆಯ ಪುನರಾರಂಭಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿತ್ತು. ಈ ಹಿನ್ನೆಲೆಯಲ್ಲಿ ಈ ವಿವಾದವನ್ನು ಬಗೆಹರಿಸುವ ಕುರಿತಾಗಿ ಸಮಿತಿಯೊಂದನ್ನು ರಚಿಸಲು ತೀರ್ಮಾನಿಸಿ ಪ್ರಶಾಸನ ಸಮಿತಿಯ ಸದಸ್ಯರಾದ ಡಾ. ಎಸ್.ಆರ್. ಲೀಲಾ ಅವರ ಅಧ್ಯಕ್ಷತೆಯಲ್ಲಿ ತ್ರಿಸದಸ್ಯ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಸಂಸ್ಕೃತ ವಾಗ್ವರ್ಧಿನಿ ಪಾಠಶಾಲೆಗೆ ಭೇಟಿ ನೀಡಿ, ಪರಿಶೀಲಿಸಿ ವರದಿಯೊಂದನ್ನು ನೀಡಿದೆ. ಈ ವರದಿಯಲ್ಲಿ ಈ ಮೇಲ್ಕಂಡ ಪಾಠಶಾಲೆಯನ್ನು ಸಂಸ್ಕೃತ ವಾಗ್ವರ್ಧಿನಿ ಸಭಾದ ಬದಲಾಗಿ ಈ ಸಂಸ್ಥೆಗೆ ಮಾತೃಸಂಸ್ಥೆಯಾದ ಸೀತಾರಾಘವ ಎಜುಕೇಷನ್ ಸೊಸೈಟಿ, ಅರಕಲಗೂಡು ಇದರ ವತಿಯಿಂದ ಪಾಠಶಾಲೆಯನ್ನು ನಡೆಸಲು ಅನುಮತಿ ನೀಡಬಹುದೆಂದು ಹಾಗೂ ಸದರಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ವೇತನ ಬಿಡುಗಡೆ ಮಾಡಲು ಕ್ರಮವಹಿಸಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಪ್ರಶಾಸನ ಸಮಿತಿಯ ಒಪ್ಪಿಗೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ವರದಿಯನ್ನು ಅನುಷ್ಠಾನಗೊಳಿಸಲು ನಿರ್ಣಯಿಸಿತು. ಆದರೆ, ವೇತನಾನುದಾನ ನೀಡಲು ಸೂಕ್ತ ನಿಯಮಗಳ ಅಡಿಯಲ್ಲಿ ಸಂಪೂರ್ಣವಾಗಿ ಪರಿಶೀಲಿಸಿ, ಅನಂತರ ಕ್ರಮವಹಿಸಬಹುದೆಂದು ಸಭೆಯು ತೀರ್ಮಾನಿಸಿತು.**

**ವಿಷಯ 8: ವಿವಿಧ ಶಾಸ್ತ್ರಗಳಲ್ಲಿ ಭಾಷಣ ಸ್ಪರ್ಧೆ ಮತ್ತು ಶಲಾಕಾ ಪರೀಕ್ಷೆಗಳಲ್ಲಿ ರಾಜ್ಯ/ರಾಷ್ಟ್ರಸ್ತರದ ಸ್ಪರ್ಧೆಗಳಲ್ಲಿ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರುವ ಸಲುವಾಗಿ ತರಬೇತಿ ಶಿಬಿರಗಳನ್ನು ಆಯೋಜಿಸುವ ಬಗೆಗೆ.**

ಟಿಪ್ಪಣಿ: ವಿವಿಧ ಶಾಸ್ತ್ರಗಳಲ್ಲಿ ಭಾಷಣ ಸ್ಪರ್ಧೆ ಮತ್ತು ಶಲಾಕಾ ಪರೀಕ್ಷೆಗಳಲ್ಲಿ ರಾಜ್ಯ/ರಾಷ್ಟ್ರಸ್ತರದ ಸ್ಪರ್ಧೆಗಳಲ್ಲಿ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರುವ ಸಲುವಾಗಿ ಆಯೋಜಿಸಲು ಉದ್ದೇಶಿಸಿರುವ ತರಬೇತಿ ಶಿಬಿರಗಳಲ್ಲಿ ಭಾಗವಹಿಸುವ ಶಾಸ್ತ್ರವಾರು ಮತ್ತು ಕಾಲೇಜುವಾರು ವಿದ್ಯಾರ್ಥಿಗಳ ಪ್ರಯಾಣ ಭತ್ಯೆ ಹಾಗೂ ಸಂಪನ್ಮೂಲ ವ್ಯಕ್ತಿಗಳ ಪ್ರಯಾಣ ಭತ್ಯೆ ಹಾಗೂ ಗೌರವ ಸಂಭಾವನೆ ಇವುಗಳಿಗಾಗಿ ರೂ. 1,34,000–00 ಗಳನ್ನು ಅಂದಾಜು ಮಾಡಲಾಗಿದ್ದು, ಈ ಮೊಬಲಗನ್ನು ಭರಿಸಲು ಪ್ರಶಾಸನ ಸಮಿತಿಯ ಒಪ್ಪಿಗೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ವಿವರವಾಗಿ ಚರ್ಚಿಸಿ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ಶಿಬಿರಗಳನ್ನು ಆಯೋಜಿಸಿರುವುದರ ಬಗೆಗೆ ಪ್ರಶಂಸಿಸಿತು. ಅನಂತರ ಸಂಪನ್ಮೂಲ ವ್ಯಕ್ತಿಗಳ ಪ್ರಯಾಣಭತ್ಯೆ ಹಾಗೂ ಗೌರವ ಸಂಭಾವನೆ ಅಂದಾಜು 1,34,000/– ರೂ.ಗಳಿಗೆ ಅನುಮೋದನೆ ನೀಡಿತು.**

**ವಿಷಯ 9: ಶ್ರೀ ಸಿದ್ಧಲಿಂಗೇಶ್ವರ ವೇದ–ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು –ಇಲ್ಲಿನ ವಿದ್ವಾನ್ ಜಿ.ಸಿ. ರಾಜಶೇಖರಯ್ಯ, ಸಹಾಯಕ ಪ್ರಾಧ್ಯಾಪಕರು, ಅಲಂಕಾರಶಾಸ್ತ್ರ ಮತ್ತು ವಿದ್ವಾನ್ ಎಸ್.ಎಸ್. ನಿರಂಜನಮೂರ್ತಿ, ಸಹಾಯಕ ಪ್ರಾಧ್ಯಾಪಕರು, ನವೀನನ್ಯಾಯಶಾಸ್ತ್ರ –ಇವರಿಗೆ ಪ್ರಾಧ್ಯಾಪಕರಾಗಿ ಮುಂಬಡ್ತಿ ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ಬಗೆಗೆ.**

ಟಿಪ್ಪಣಿ: ಅ. ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾಮಠ, ತುಮಕೂರು –ಇಲ್ಲಿ ಅಲಂಕಾರಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ, ವಿದ್ವಾನ್ ಡಿ. ಬಸವರಾಜು –ಇವರ ವಯೋನಿವೃತ್ತಿಯಿಂದ ದಿನಾಂಕ 01.06.2004 ರಿಂದ ಖಾಲಿ ಇರುವ ಪ್ರಾಧ್ಯಾಪಕ ಹುದ್ದೆಗೆ ಅಲಂಕಾರ ಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ವಿದ್ವಾನ್ ಜಿ.ಸಿ. ರಾಜಶೇಖರಯ್ಯ ಇವರು ಸೇವಾ ಜ್ಯೇಷ್ಠತೆ ಹೊಂದಿರುವ ಹಿನ್ನೆಲೆಯಲ್ಲಿ ಆಡಳಿತ ಮಂಡಳಿಯವರು ಪ್ರಾಧ್ಯಾಪಕರಾಗಿ ಮುಂಬಡ್ತಿ ನೀಡಿರುವುದನ್ನು ಮಾನ್ಯ ಕುಲಸಚಿವರು ಪತ್ರ ಸಂಖ್ಯೆ ಕಸಂವಿ/20/1/ಪ್ರಾ.ಬಡ್ತಿ.ಅ/2012–13/291, ದಿನಾಂಕ 30.07.2012 ರಲ್ಲಿ ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಅನುಮೋದಿಸಿರುತ್ತಾರೆ.

ಆ. ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾಮಠ, ತುಮಕೂರು –ಇಲ್ಲಿ ನವೀನನ್ಯಾಯ ಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಆರ್. ಶ್ರೀಧರ್‌ಶಾಸ್ತ್ರಿ ಇವರ ವಯೋನಿವೃತ್ತಿಯಿಂದ ದಿನಾಂಕ 01.09.2010 ರಿಂದ ಖಾಲಿ ಇರುವ ಪ್ರಾಧ್ಯಾಪಕರ ಹುದ್ದೆಗೆ ಅದೇ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ವಿದ್ವಾನ್ ಎಸ್.ಎಸ್. ನಿರಂಜನಮೂರ್ತಿ ಇವರು ಸೇವಾ ಜ್ಯೇಷ್ಠತೆಯನ್ನು ಹೊಂದಿರುವ ಹಿನ್ನೆಲೆಯಲ್ಲಿ ಆಡಳಿತ ಮಂಡಳಿಯವರು ಪ್ರಾಧ್ಯಾಪಕರಾಗಿ ಮುಂಬಡ್ತಿ ನೀಡಿರುವುದನ್ನು ಮಾನ್ಯ ಕುಲಸಚಿವರು ಪತ್ರ

ಸಂಖ್ಯೆ ಕಸಂವಿ/20/1/ಪ್ರಾ.ಬಡ್ತಿ.ಅ/2012–13/291, ದಿನಾಂಕ 30.07.2012 ರಲ್ಲಿ ಅನುಮೋದಿಸಿರುತ್ತಾರೆ. ಪ್ರಶಾಸನ ಸಮಿತಿ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿ ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 10: ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು, (ಕೋಟೆಮನೆ), ಉಮ್ಮಚಗಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ – ಇಲ್ಲಿನ ವಿದ್ವಾನ್ ರಾಮಚಂದ್ರ ನಾರಾಯಣ ಭಟ್ಟ ಅವರಿಗೆ ಪ್ರಾಚಾರ್ಯರಾಗಿ ಮತ್ತು ವಿದ್ವಾನ್ ವೆಂಕಟೇಶ ಬಿನ್ ಗಜಾನನ ಭಟ್ಟ ಅವರಿಗೆ ಪ್ರಾಧ್ಯಾಪಕರಾಗಿ ಮುಂಬಡ್ತಿ ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ಬಗೆಗೆ.**

ಟಿಪ್ಪಣಿ: ಅ. ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು, (ಕೋಟೆಮನೆ) ಉಮ್ಮಚಗಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ – ಇಲ್ಲಿ ದಿನಾಂಕ 31.05.2011 ರವರೆಗೆ ಪ್ರಾಚಾರ್ಯರಾಗಿದ್ದ ವಿದ್ವಾನ್ ಜಿ.ಎಲ್. ಭಟ್ಟರವರ ವಯೋನಿವೃತ್ತಿಯಿಂದ ತೆರವಾದ ಪ್ರಾಚಾರ್ಯರ ಹುದ್ದೆಗೆ ಅದೇ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ರಾಮಚಂದ್ರ ನಾರಾಯಣ ಭಟ್ಟ ಇವರಿಗೆ ಸೇವಾ ಹಿರಿತನದಂತೆ ಅನುದಾನ ಸಂಹಿತಾ ನಿಯಮಾನುಸಾರ ದಿನಾಂಕ 01.06.2011 ರಿಂದ ಪ್ರಾಚಾರ್ಯರಾಗಿ ಆಡಳಿತ ಮಂಡಳಿಯವರು ಮುಂಬಡ್ತಿ ನೀಡಿರುವುದನ್ನು ಸರ್ಕಾರದ ಆದೇಶ ಸಂಖ್ಯೆ ಇಡಿ 300 ಯುಆರ್‌ಸಿ 2011, ದಿನಾಂಕ 03.07.2012ರ ಪ್ರಕಾರ ಮಾನ್ಯ ಕುಲಸಚಿವರು ಪತ್ರ ಸಂಖ್ಯೆ ಕಸಂವಿ/21/1/ಪ್ರಾ.ಹು.ಮುಂ/ 2012–13/289, ದಿನಾಂಕ 28.07.2012 ರಲ್ಲಿ ಅನುಮೋದಿಸಿರುತ್ತಾರೆ. ಪ್ರಶಾಸನ ಸಮಿತಿ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ಆ. ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು, (ಕೋಟೆಮನೆ) ಉಮ್ಮಚಗಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ–ಇಲ್ಲಿ ವ್ಯಾಕರಣ ಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ರಾಮಚಂದ್ರ ನಾರಾಯಣ ಭಟ್ಟ ಇವರಿಗೆ ದಿನಾಂಕ 01.06.2011 ರಂದು ಆಡಳಿತ ಮಂಡಳಿಯವರು ಪ್ರಾಚಾರ್ಯರಾಗಿ ಮುಂಬಡ್ತಿ ನೀಡಿರುವುದನ್ನು ದಿನಾಂಕ 28.07.2012 ರಲ್ಲಿ ಅನುಮೋದಿಸಿರುವ ಹಿನ್ನೆಲೆಯಲ್ಲಿ ತೆರವಾದ ವ್ಯಾಕರಣ ಶಾಸ್ತ್ರ ಪ್ರಾಧ್ಯಾಪಕರ ಹುದ್ದೆಗೆ ಸದರಿ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಹಾಗೂ ಸೇವಾ ಜ್ಯೇಷ್ಠತೆ ಹೊಂದಿರುವ ವಿದ್ವಾನ್ ವೆಂಕಟೇಶ ಬಿನ್ ಗಜಾನನ ಭಟ್ಟ ಇವರಿಗೆ ಆಡಳಿತ ಮಂಡಳಿಯವರು ಪ್ರಾಧ್ಯಾಪಕರಾಗಿ ಮುಂಬಡ್ತಿ ನೀಡಿರುವುದನ್ನು ಮಾನ್ಯ ಕುಲಸಚಿವರು ಪತ್ರ ಸಂಖ್ಯೆ ಕಸಂವಿ/101/ಪ್ರಾ.ಬಡ್ತಿ.ಅ/2012–13/300, ದಿನಾಂಕ 01.08.2012 ರಲ್ಲಿ ಅನುಮೋದಿಸಿರುತ್ತಾರೆ. ಪ್ರಶಾಸನ ಸಮಿತಿ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿ ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 11: ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ –ಇಲ್ಲಿನ ವಿದ್ವಾನ್ ರಾಮಚಂದ್ರ ಅಣ್ಣಾಜಿ ಉಪಾಧ್ಯೆ ಇವರ ವೇತನಶ್ರೇಣಿ ನಿಗದಿಪಡಿಸುವ ಬಗೆಗೆ.**

ಟಿಪ್ಪಣಿ: ವಿದ್ವಾನ್ ರಾಮಚಂದ್ರ ಅಣ್ಣಾಜಿ ಉಪಾಧ್ಯೆ, ಪ್ರಾಚಾರ್ಯರು, ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ–587 301, ಬಾಗಲಕೋಟೆ ಜಿಲ್ಲೆ ಇವರ ವೇತನ ಶ್ರೇಣಿಯಲ್ಲಾಗಿರುವ ವ್ಯತ್ಯಾಸವನ್ನು ಸರಿಪಡಿಸಲು ಕೋರಿದ್ದು, ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ ಇಡಿ 62 ಎಲ್.ಎಸ್.ಇ 2007, ಬೆಂಗಳೂರು ದಿನಾಂಕ 10.01.2008 ರಂತೆ ಈಗಾಗಲೇ ತಪ್ಪಾಗಿ ನಿಗದಿಯಾದ ಕೆಲ ಕಾಲೇಜುಗಳ ಪ್ರಾಚಾರ್ಯರುಗಳ ವೇತನ ಶ್ರೇಣಿಯನ್ನು ಸರಿಮಾಡಿ ನಿಗದಿಪಡಿಸಲಾಗಿದ್ದು, ಅದೇ ರೀತಿ ವಿದ್ವಾನ್ ರಾಮಚಂದ್ರ ಅಣ್ಣಾಜಿ ಉಪಾಧ್ಯೆ ಇವರ ಸೇವಾವಹಿಯನ್ನು ಪರಿಶೀಲಿಸಿ ಇದರಿಂದ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆಯಾಗದಿರುವುದನ್ನು ಗಮನಿಸುತ್ತಾ ಉಲ್ಲೇಖದ ಸರ್ಕಾರಿ ಆದೇಶದಂತೆ ವೇತನ ಶ್ರೇಣಿಯ ನಿಗದಿಯಲ್ಲಾದ ವ್ಯತ್ಯಾಸಗಳನ್ನು ಸರಿಪಡಿಸಲು ನಿರ್ಣಯಿಸಬೇಕಾಗಿದೆ. ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿ ಅನುಮೋದನೆ ನೀಡಿತು.**

**ವಿಷಯ 12: ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು, (ಕೋಟೆಮನೆ), ಉಮ್ಮಚಗಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ – ಇಲ್ಲಿ ಸಾಹಿತ್ಯ ಸಹಾಯಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಶರಾವತಿ ಭಟ್ ಅವರಿಗೆ 'ಹಿರಿಯ ಪ್ರಾಧ್ಯಾಪಕ'ರ ಹುದ್ದೆಗೆ ಪದೋನ್ನತಿ ಬಡ್ತಿ ನೀಡುವ ಬಗೆಗೆ.**

ಟಿಪ್ಪಣಿ: ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು, (ಕೋಟೆಮನೆ) ಉಮ್ಮಚಗಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ–ಇಲ್ಲಿ ಸಾಹಿತ್ಯ ಸಹಾಯಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಶರಾವತಿ ಭಟ್ ಇವರಿಗೆ ಆಡಳಿತ ಮಂಡಳಿಯವರು "ಹಿರಿಯ ಪ್ರಾಧ್ಯಾಪಕರ" ಹುದ್ದೆಗೆ ಪದೋನ್ನತಿ ಬಡ್ತಿ ನೀಡಿ ಅನುಮೋದಿಸುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಅನುದಾನ ಸಂಹಿತೆ ನಿಯಮ 34 (ವಿ) ರಲ್ಲಿ ಸಂಸ್ಕೃತ ಕಾಲೇಜುಗಳ ಸ್ಟಾಫ್ ಪ್ಯಾಟರನ್ ಬಗ್ಗೆ ವಿವರಣೆ ಲಭ್ಯವಿದೆ. ಇದರ ಪ್ರಕಾರ ಪ್ರಥಮಾ ಒಂದನೇ ತರಗತಿಯಿಂದ ವಿದ್ವದುತ್ತಮಾ ಅಂತಿಮ ವರ್ಷದವರೆಗೆ ನಡೆಯುವ ಸಂಸ್ಕೃತ ಕಾಲೇಜುಗಳನ್ನು "ಎ" ದರ್ಜೆ ಸಂಸ್ಕೃತ ಕಾಲೇಜೆಂದು ಕರೆಯಲಾಗುತ್ತದೆ. ಮತ್ತು ಇಂತಹ ಸಂಸ್ಕೃತ ಕಾಲೇಜುಗಳಲ್ಲಿ ಒಬ್ಬ ಸೀನಿಯರ್ ಪ್ರಾಧ್ಯಾಪಕರ ಹುದ್ದೆ ಲಭ್ಯವಾಗುತ್ತದೆ. ಇದರಂತೆ ಸರ್ಕಾರಿ ಆದೇಶ ಸಂಖ್ಯೆ ಇಡಿ 56 ಪಿಎಸ್‌ಇ 76ರ ಪ್ರಕಾರ ಆಯುಕ್ತರು

ಸಾಶಿಇ ಬೆಂಗಳೂರು ಇವರು ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು ಈ ಸಂಸ್ಕೃತ ಕಾಲೇಜಿಗೆ ಒಂದು ಸೀನಿಯರ್ ಪ್ರಾಧ್ಯಾಪಕರ ಹುದ್ದೆ ನೀಡಿರುತ್ತಾರೆ. ನಂತರ ಸರ್ಕಾರಿ ಆದೇಶ ಸಂಖ್ಯೆ ಇಡಿ 20 ಎಲ್ಎಸ್ ಇ 84 ಈ ಆದೇಶದಲ್ಲಿ ಸರ್ಕಾರಿ ಸಂಸ್ಕೃತ ಕಾಲೇಜುಗಳಲ್ಲಿ ಕಿರಿಯ ಪ್ರಾಧ್ಯಾಪಕ ಮತ್ತು ಹಿರಿಯ ಪ್ರಾಧ್ಯಾಪಕರುಗಳ ಪದನಾಮವನ್ನು ವಿಲೀನಗೊಳಿಸಿ ಪ್ರಾಧ್ಯಾಪಕರು ಎಂಬುದಾಗಿ ಕರೆಯಲಾಗುತ್ತಿದೆ. ಆದರೆ ಈ ಸರ್ಕಾರಿ ಆದೇಶವು ಅನುದಾನಿತ ಸಂಸ್ಕೃತ ಕಾಲೇಜುಗಳಿಗೆ ಅನ್ವಯವಾಗುವುದಿಲ್ಲ.

ಪ್ರಸ್ತುತ ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು, ಉಮ್ಮಚಗಿ ಈ ಸಂಸ್ಕೃತ ಕಾಲೇಜಿನ ಪ್ರಥಮ 1ನೇ ತರಗತಿಯಿಂದ ವಿದ್ವದುತ್ತಮಾ ಅಂತಿಮ ವರ್ಷದವರೆಗೆ ನಡೆಯುತ್ತಿದ್ದು 'ಎ' ದರ್ಜೆ ಸಂಸ್ಕೃತ ಕಾಲೇಜಾಗಿರುತ್ತದೆ. ಶಾಲಾ ಆಡಳಿತಮಂಡಳಿಯವರು ಪ್ರಸ್ತಾವನೆಯಲ್ಲಿ ಶ್ರೀಮತಿ ಶರಾವತಿಭಟ್ಟ, ಸಾಹಿತ್ಯ ಸಹಾಯಕರು ಇವರು ಸದರಿ ಸಂಸ್ಕೃತ ಕಾಲೇಜಿನಲ್ಲಿ ಹಿರಿಯ ಶಿಕ್ಷಕರಾಗಿದ್ದು ಈಗಾಗಲೇ ಶಾಸ್ತ್ರವಾರು ಪ್ರಾಧ್ಯಾಪಕರಾಗಿ ಬಡ್ತಿ ನೀಡಿರುವ ಪ್ರಾಧ್ಯಾಪಕರುಗಳಿಗಿಂತ ಹಿರಿಯರಾಗಿರುತ್ತಾರೆ. ಶಾಲಾ ಆಡಳಿತಮಂಡಳಿಯವರ ಕೋರಿಕೆಯಂತೆ ಸೀನಿಯರ್ ಪ್ರಾಧ್ಯಾಪಕರಾಗಿ ಬಡ್ತಿ ನೀಡಿದಲ್ಲಿ ಸಾಹಿತ್ಯ ಸಹಾಯಕರ ಹುದ್ದೆ ತೆರವಾಗಬೇಕಾಗಿದೆ. ಈ ರೀತಿ ಬಡ್ತಿ ನೀಡಿದಲ್ಲಿ ಒಂದು ಹೆಚ್ಚುವರಿ ಹುದ್ದೆ ನೀಡಿದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಾಧ್ಯಾಪಕರ ಹುದ್ದೆ ಮತ್ತು ಸೀನಿಯರ್ (ಹಿರಿಯ) ಪ್ರಾಧ್ಯಾಪಕರ ಹುದ್ದೆಗೆ ಒಂದೇ ವೇತನಶ್ರೇಣಿಯಿದ್ದು, ಸದರಿ ಸಿಬ್ಬಂದಿಗೆ ಸೀನಿಯರ್ ಪ್ರಾಧ್ಯಾಪಕರಾಗಿ ಬಡ್ತಿ ಅನುಮೋದಿಸುವಾಗ ಸೀನಿಯರ್ ಪ್ರಾಧ್ಯಾಪಕರ ಕೆಲಸದ ಹೊರೆಯೊಂದಿಗೆ ಸಾಹಿತ್ಯ ಸಹಾಯಕರ ಹುದ್ದೆಯ ಕಾರ್ಯಭಾರ ನಿರ್ವಹಿಸುವ ಷರತ್ತು ವಿಧಿಸಿ ಬಡ್ತಿ ಅನುಮೋದಿಸುವ ಬಗ್ಗೆ ಆದೇಶ ನೀಡಬಹುದಾಗಿದೆ. ಇದರೊಂದಿಗೆ ಸದರಿ ಸಿಬ್ಬಂದಿ ಮುಂದೆ ಪದೋನ್ನತಿ ಬಡ್ತಿಯಾಗಲೀ/ನಿವೃತ್ತಿಯಾಗಲೀ ಹೊಂದಿದಾಗ ಇವರಿಗೆ ನೀಡಲಾದ ಸೀನಿಯರ್ ಪ್ರಾಧ್ಯಾಪಕರು ಹುದ್ದೆ ತಾನಾಗಿಯೇ ರದ್ದಾಗಲಿದೆ ಮತ್ತು ಸಾಹಿತ್ಯ ಸಹಾಯಕರ ಹುದ್ದೆ ಅಂದಿನಿಂದ ತೆರವಾಗುತ್ತೆ ಎಂಬ ಷರತ್ತನ್ನು ವಿಧಿಸಿ ಬಡ್ತಿ ಅನುಮೋದಿಸುವ ಬಗ್ಗೆ ವಿವರಗಳನ್ನು ಮಂಡಿಸಿದೆ. ಈ ರೀತಿ ಬಡ್ತಿ ಅನುಮೋದಿಸುವುದರಿಂದ ಒಂದು ಹೆಚ್ಚುವರಿ ವಾರ್ಷಿಕ ಬಡ್ತಿ ನೀಡಿದಂತಾಗುತ್ತದೆ. ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿ ಶ್ರೀಮತಿ ಶರಾವತಿ ಭಟ್ ಅವರಿಗೆ ಹಿರಿಯ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡಲು ಅನುಮೋದನೆ ನೀಡಿತು.**

## ವಿಷಯ 13: ಶ್ರೀ ಪೂರ್ಣಪ್ರಜ್ಞ ಸಂಸ್ಕೃತ ಕಾಲೇಜು, ರಾಜೇಂದ್ರ ನಗರ, ಚಿತ್ರದುರ್ಗ –ಈ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿದ ತ್ರಿಸದಸ್ಯ ಸಮಿತಿಯ ವರದಿ ಬಗೆಗೆ.

ಟಿಪ್ಪಣಿ: ಶ್ರೀ ಪೂರ್ಣಪ್ರಜ್ಞಾ ಸಂಸ್ಕೃತ ಕಾಲೇಜು, ರಾಜೇಂದ್ರ ನಗರ, ಚಿತ್ರದುರ್ಗ–577 501–ಈ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎರಡು ಬೋಧಕ ಹಾಗೂ ನಾಲ್ಕು ಬೋಧಕೇತರ ಹುದ್ದೆಗಳೂ ಸೇರಿದಂತೆ ಒಟ್ಟು ಆರು ಹುದ್ದೆಗಳನ್ನು ಷರತ್ತುಗಳಿಗೊಳಪಟ್ಟು ಸರ್ಕಾರಿ ಆದೇಶ ಸಂಖ್ಯೆ ಇಡಿ 6 ಯುಡಿವಿ 2011, ಬೆಂಗಳೂರು, ದಿನಾಂಕ 04.06.2012ರಲ್ಲಿ ವೇತನಾನುದಾನಕ್ಕೆ ಒಳಪಡಿಸಿ ಆದೇಶಿಸಿರುವ ಹಿನ್ನೆಲೆಯಲ್ಲಿ ದಿನಾಂಕ 10.08.2012 ರಂದು ತ್ರಿಸದಸ್ಯ ಸಮಿತಿಯ ಸದಸ್ಯರು ಸದರಿ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿ, ಪರಿಶೀಲನಾ ವರದಿಯನ್ನು ಸಲ್ಲಿಸಿರುತ್ತಾರೆ. ಪರಿಶೀಲನಾ ವರದಿಯ ಪ್ರಕಾರ ಬೋಧಕ ಸಿಬ್ಬಂದಿಗಳು ಅನಧಿಕೃತ ಗೈರು ಹಾಜರಾಗಿದ್ದು ವಿದ್ಯಾರ್ಥಿಗಳ ಹಾಜರಾತಿಯು ನಿಗದಿತ ಸಂಖ್ಯೆಗಿಂತ ಕಡಿಮೆ ಇರುತ್ತದೆ. ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದಿಂದ 2011–12ನೇ ಸಾಲಿಗೆ ಪ್ರಥಮಾ ಮತ್ತು ಕಾವ್ಯ ತರಗತಿಗಳಿಗೆ ಅನುದಾನರಹಿತವಾಗಿ ಮಾನ್ಯತೆ ನೀಡಲಾಗಿದೆ. ವಿದ್ವತ್ ತರಗತಿಗಳಿಗೆ ಮಾನ್ಯತೆ ನೀಡಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಆದ್ದರಿಂದ ತ್ರಿಸದಸ್ಯ ಸಮಿತಿಯ ಪರಿಶೀಲನಾ ವರದಿಯೊಂದಿಗೆ ಸರ್ಕಾರಕ್ಕೆ ಪತ್ರ ಬರೆಯಬಹುದಾಗಿದೆ. ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿತು. ತ್ರಿಸದಸ್ಯ ಸಮಿತಿಯ ಪರಿಶೀಲನಾ ವರದಿಯನ್ನು ಸೂಕ್ತ ಪ್ರಸ್ತಾವನೆಯೊಡನೆ ಸರ್ಕಾರಕ್ಕೆ ಕಳುಹಿಸಲು ಅನುಮೋದಿಸಿತು.**

## ವಿಷಯ 14: ಬೋಧಕ–ಬೋಧಕೇತರ ಸಿಬ್ಬಂದಿಗಳ ಅರ್ಜಿಗಳ ಪರಿಶೀಲನಾ ಸಮಿತಿ ಸದಸ್ಯರಿಗೆ ಪರಿಶೀಲನಾ ಭತ್ಯೆ ನೀಡುವ ಬಗೆಗೆ.

ಟಿಪ್ಪಣಿ: ದಿನಾಂಕ: 16.07.2012ರಂದು ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಲಾಗಿತ್ತು. ಅದರಂತೆ 10.08.2012ರ ಒಳಗೆ ವಿವಿಧ ಹುದ್ದೆಗಳಿಗೆ ಸುಮಾರು 850 ಅರ್ಜಿಗಳು ಬಂದಿವೆ. ಇವುಗಳನ್ನು ಪರಿಶೀಲನೆ ಮಾಡಲು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯಲ್ಲಿರುವ ಸದಸ್ಯರಿಗೆ ಪ್ರತಿ ಅರ್ಜಿಗೆ 10/– ರೂ.ಗಳಂತೆ ಪರಿಶೀಲನಾ ಹಣವನ್ನು ನೀಡಬಹುದಾಗಿದೆ. ಈಗಾಗಲೇ ತುಮಕೂರು ವಿಶ್ವವಿದ್ಯಾಲಯವು ಬೋಧಕೇತರ ಹುದ್ದೆಗಳ ಅರ್ಜಿ ಪರಿಶೀಲನೆ ಮಾಡಿದ ಸದಸ್ಯರಿಗೆ ಅರ್ಜಿಯೊಂದಕ್ಕೆ 10/– ರೂ.ಗಳಂತೆ ನೀಡಲು ದಿನಾಂಕ: 25.06.2010ರಂದು ನಡೆದ ತನ್ನ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದು ಪಾವತಿಸಿದೆ. ಆ ಕ್ರಮವನ್ನು ಅನ್ವಯಿಸಿ ಅರ್ಜಿಯೊಂದಕ್ಕೆ 10/– ರೂ.ಗಳಂತೆ ನೀಡಲು ಸಭೆಯ ಅನುಮೋದನೆ ಕೋರಿದೆ.

ನಿರ್ಣಯ: **ಸಭೆಯು ಅರ್ಜಿಯೊಂದಕ್ಕೆ 10/– ರೂ. ನೀಡಲು ಅಥವಾ ದಿನವೊಂದಕ್ಕೆ 500/– ರೂ.ಗಳ ಪರಿಶೀಲನಾ ಭತ್ಯೆ ನೀಡಲು ಒಪ್ಪಿಗೆ ನೀಡಿತು.**

**ವಿಷಯ 15: ರಾಜ್ಯದಲ್ಲಿನ ಅನುದಾನಿತ ಸಂಸ್ಕೃತ ಪಾಠಶಾಲಾ ಶಿಕ್ಷಕರುಗಳಿಗೆ ಮಾಸಿಕ ರೂ. 200/– ವಿಶೇಷ ಭತ್ಯೆಯನ್ನು ಮುಂದುವರಿಸುವ ಬಗೆಗೆ.**

ಟಿಪ್ಪಣಿ: ಸರ್ಕಾರಿ ಆದೇಶ ಸಂಖ್ಯೆ: ಆ.ಇ. 8 ಎಸ್‌ಆರ್‌ಪಿ 2006, ದಿನಾಂಕ: 29.03.2006ರಲ್ಲಿ ರಾಜ್ಯದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ದಿನಾಂಕ: 01.04.2006ರಿಂದ ಜಾರಿಗೆ ಬರುವಂತೆ ಮಾಸಿಕ ರೂ. 200/– ವಿಶೇಷ ಭತ್ಯೆ ಮಂಜೂರು ಮಾಡಲಾಗಿದೆ.

ಕರ್ನಾಟಕ ಪ್ರೌಢಶಿಕ್ಷಣ ಶಿಕ್ಷಕರ ಸಂಘ ಮತ್ತು ಪದವಿಪೂರ್ವ ಉಪನ್ಯಾಸಕರ ಸಂಘದವರು ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿ ಪ್ರೌಢಶಿಕ್ಷಣ ಶಾಲಾ ಶಿಕ್ಷಕರಿಗೆ ಮತ್ತು ಪದವಿಪೂರ್ವ ಉಪನ್ಯಾಸಕರಿಗೂ ಸಹ ಮಾಸಿಕ ರೂ. 200/– ವಿಶೇಷ ಭತ್ಯೆಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಸರ್ಕಾರವು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರಿ ಆದೇಶ ಸಂಖ್ಯೆ: ಆಇ 14 ಎಸ್‌ಆರ್‌ಪಿ 2006; ದಿನಾಂಕ: 12.05.2006ರಲ್ಲಿ ಅನುದಾನಿತ ಪ್ರೌಢಶಾಲಾ ಶಿಕ್ಷಕರಿಗೆ ಮತ್ತು ಪದವಿಪೂರ್ವ ಕಾಲೇಜಿನ ಉಪನ್ಯಾಸಕರುಗಳಿಗೆ ಮಾಸಿಕ ರೂ. 200/– ವಿಶೇಷ ಭತ್ಯೆಯನ್ನು ದಿನಾಂಕ: 01.04.2006ರಿಂದಲೇ ಜಾರಿಗೆ ಬರುವಂತೆ ಮಂಜೂರು ಮಾಡಿ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅನ್ವಯವಾಗುವ ಸೌಲಭ್ಯಗಳನ್ನು ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೂ ವಿಸ್ತರಿಸುವಂತೆ ನಿರ್ದೇಶಕರು (ಪ್ರೌಢಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು –ಇವರ ಶಿಫಾರಸ್ಸಿನಂತೆ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ) –ಇವರು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: 433 ಸೇ–2/2010; ದಿನಾಂಕ: 06.12.2010ರ ಸಹಮತಿ ಅನ್ವಯ ಆದೇಶ ಸಂಖ್ಯೆ ಇಡಿ 3 ಯುಡಿವಿ 2011; ದಿನಾಂಕ: 26.07.2012ರಲ್ಲಿ ರಾಜ್ಯದಲ್ಲಿನ ಅನುದಾನಿತ ಸಂಸ್ಕೃತ ಪಾಠಶಾಲಾ ಶಿಕ್ಷಕರುಗಳಿಗೆ ರೂ. 200/– ವಿಶೇಷ ಭತ್ಯೆಯನ್ನು ಮುಂದುವರಿಸುವ ಸಂಬಂಧ 5ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸಿನನ್ವಯ ಅನುಮೋದನೆ ನೀಡಿ ಆದೇಶಿಸಲಾಗಿದೆ. ಅದರಂತೆ ದಿನಾಂಕ: 01.04.2006ರಿಂದ ರೂ. 200/– ವಿಶೇಷ ಭತ್ಯೆ ಪಡೆಯಲು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ 264 ಎಸ್‌ಎಲ್‌ಬಿ 2012; ದಿನಾಂಕ: 09.05.2012ರ ಆದೇಶದಲ್ಲಿ ಮಾಸಿಕ ರೂ. 300/– ವಿಶೇಷ ಭತ್ಯೆಯನ್ನು ದಿನಾಂಕ: 09.05.2012ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ. ದಿನಾಂಕ: 26.07.2012ರ ಷರತ್ತುಗಳನ್ನು ಗಮನಿಸಲಾಗಿದೆ. ಘಟನೋತ್ತರ ಅನುಮೋದನೆಗಾಗಿ ಸಭೆಯ ಮುಂದೆ ಇರಿಸಿದೆ.

ನಿರ್ಣಯ: **ಸರ್ಕಾರದ ಆದೇಶದಂತೆ ಕ್ರಮವಹಿಸಲು ಸಭೆಯು ಅನುಮೋದಿಸಿತು.**

**ವಿಷಯ 16: ಪ್ರಥಮ ದೀಕ್ಷಾಂತ ಘಟಿಕೋತ್ಸವವನ್ನು ಸೆಪ್ಟೆಂಬರ್ ಕೊನೆಯ ವಾರ ಅಥವಾ ಅಕ್ಟೋಬರ್ ಮೊದಲ ವಾರದಲ್ಲಿ ರಾಜಭವನದ ಗಾಜಿನಮನೆಯಲ್ಲಿ ಆಚರಿಸುವ ಬಗೆಗೆ.**

ಟಿಪ್ಪಣಿ: ಘನತೆವೆತ್ತ ರಾಜ್ಯಪಾಲರು ಸೆಪ್ಟೆಂಬರ್ ಕೊನೆಯ ವಾರ ಅಥವಾ ಅಕ್ಟೋಬರ್ ಮೊದಲ ವಾರದಲ್ಲಿ ಘಟಿಕೋತ್ಸವ ನಡೆಸಲು ಒಪ್ಪಿರುತ್ತಾರೆ. ಆ ದಿನ 2010–11ನೇ ಸಾಲಿನಲ್ಲಿ ವಿವಿಧ ಶಾಸ್ತ್ರಗಳಲ್ಲಿ ವಿಶಿಷ್ಟ ಶ್ರೇಣಿ ಪಡೆದು ಉತ್ತೀರ್ಣರಾದವರಿಗೆ 5000/– ನಗದು, ಪ್ರಮಾಣಪತ್ರ, ಶಲ್ಯ ನೀಡುವುದು. ಬಿ.ಎ. ವಿದ್ವನ್ಮಧ್ಯಮಾ ಪದವಿ ಪಡೆದ ವಿದ್ಯಾರ್ಥಿಗಳಿಗೂ ಎಂ.ವಿ. ವಿದ್ವದುತ್ತಮಾ ಪದವಿ ಪಡೆದ ವಿದ್ಯಾರ್ಥಿಗಳಿಗೂ ಘಟಿಕೋತ್ಸವ ಪ್ರಮಾಣಪತ್ರ ನೀಡಬೇಕಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಘನತೆವೆತ್ತ ರಾಜ್ಯಪಾಲರು ಅಕ್ಟೋಬರ್ 10ರಂದು ದೀಕ್ಷಾಂತ ಘಟಿಕೋತ್ಸವ ಸಮಾರಂಭ ನಡೆಸಲು ಸೂಚಿಸಿರುವ ಅಂಶವನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಸಭೆಯು ಎಲ್ಲ ಅಂಶಗಳಿಗೆ ಅನುಮೋದನೆ ನೀಡಿತು.**

**ವಿಷಯ 17: ಪ್ರೊ. ಕೆ.ಎಸ್. ಕಣ್ಣನ್ ಅವರು ನಿಯೋಜನೆಯ ಮೇರೆಗೆ ವಿಶ್ವವಿದ್ಯಾಲಯದ ಸೇವೆಗೆ ಹಾಜರಾಗಿರುವ ಬಗೆಗೆ.**

ಟಿಪ್ಪಣಿ: ಪ್ರೊ. ಕೆ.ಎಸ್. ಕಣ್ಣನ್, ಸಂಸ್ಕೃತ ಉಪಪ್ರಾಧ್ಯಾಪಕರು, ನ್ಯಾಷನಲ್ ಕಾಲೇಜು, ಗೌರಿಬಿದನೂರು –ಇವರನ್ನು ಸರ್ಕಾರದ ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ 299 ಯುಆರ್‌ಸಿ 2012, ದಿನಾಂಕ: 21.08.2012ರ ನಿರ್ದೇಶನದಂತೆ ಅನ್ಯಕಾರ್ಯನಿಮಿತ್ತ ಒಂದು ವರ್ಷದ ಅವಧಿಗೆ ಕಾರ್ಯನಿರ್ವಹಿಸಲು ಆದೇಶಿಸಿದೆ. ಇದರನ್ವಯ ಮಾನ್ಯರು ತಮ್ಮ ಮೂಲ ಹುದ್ದೆಯಿಂದ ಬಿಡುಗಡೆಗೊಂಡು ವಿಶ್ವವಿದ್ಯಾಲಯಕ್ಕೆ ದಿನಾಂಕ: 23.08.2012ರ ಪೂರ್ವಾಹ್ನ ವರದಿ ಮಾಡಿಕೊಂಡಿದ್ದು, ಇವರನ್ನು 'ಅಭಿಲಷಿತಾರ್ಥ ಚಿಂತಾಮಣಿ ವಿಶ್ವಕೋಶ' ಯೋಜನೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುವಂತೆ ಆದೇಶಿಸಲಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಈ ಅಂಶಕ್ಕೆ ಅನುಮೋದಿಸಿತು.**

## ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:

**ವಿಷಯ 1: 'ಕಟ್ಟಡ ಸಲಹಾ ಸಮಿತಿ'ಗೆ ಘಟನೋತ್ತರ ಅನುಮೋದನೆಯನ್ನು ನೀಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾದ ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು ಮತ್ತು ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜುಗಳ ಆವರಣದಲ್ಲಿ ಕಟ್ಟಡ ನಿರ್ಮಾಣದ ಕಾರ್ಯವನ್ನು ಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಮಾನ್ಯ ಕುಲಪತಿಗಳು ತನಗೆ ದತ್ತವಾಗಿರುವ ಅಧಿಕಾರದ ಮೇರೆಗೆ ಈ ಕೆಳಕಂಡ ಸದಸ್ಯರನ್ನು ಒಳಗೊಂಡ 'ಕಟ್ಟಡ ಸಲಹಾ ಸಮಿತಿ'ಯನ್ನು ಒಂದು ವರ್ಷದ ಅವಧಿಗೆ (ಆಗಸ್ಟ್ 21, 2012ರಿಂದ ಆಗಸ್ಟ್ 20, 2013) ರಚಿಸಿದ್ದಾರೆ.

| | | |
|---|---|---|
| 1. | **ಕುಲಪತಿಗಳು,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ | ಅಧ್ಯಕ್ಷರು |
| 2. | **ಡಿ. ಸುರೇಂದ್ರ ಕುಮಾರ್,** ಪ್ರಶಾಸನ ಸಮಿತಿ ಸದಸ್ಯರು | ಸದಸ್ಯರು |
| 3. | **ಪ್ರೊ. ಎಸ್.ಸಿ. ಶರ್ಮಾ,** ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು | ಸದಸ್ಯರು |
| 4. | **ಡಾ. ಸಿ. ಚಂದ್ರಶೇಖರ್,** ಮಾಜಿ ಅಧ್ಯಕ್ಷರು ಲಲಿತಕಲಾ ಅಕಾಡೆಮಿ, ಬೆಂಗಳೂರು | ಸದಸ್ಯರು |
| 5. | **ಕಾರ್ಯಪಾಲಕ ಅಭಿಯಂತರರು,** ಲೋಕೋಪಯೋಗಿ ವಿಭಾಗ ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಮೈಸೂರು | ಸದಸ್ಯರು |
| 6. | **ಅಭಿಯಂತರರು,** ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಲೋಕೋಪಯೋಗಿ ಇಲಾಖೆ, ಬೆಂಗಳೂರು | ಸದಸ್ಯರು |
| 7. | **ಕುಲಸಚಿವರು,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ | ಸದಸ್ಯ ಕಾರ್ಯದರ್ಶಿ |

ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಕಟ್ಟಡ ಸಲಹಾ ಸಮಿತಿಯ ಒಂದು ವರ್ಷದ ಅವಧಿಗೆ ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 2: ಶತಾವಧಾನಿ ಡಾ. ಆರ್. ಗಣೇಶ್ ಅವರನ್ನು ಗೌರವ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಳ್ಳುವುದರ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿಸೂಚನೆಯ ಪ್ರಕರಣ 13–4(ಎ)ರಲ್ಲಿ ದತ್ತವಾದ ಅಧಿಕಾರದಂತೆ ಮತ್ತು ಅಂಶ 7ರಲ್ಲಿ ನಿಹಿತವಾದ ಅಧಿಕಾರದಂತೆ ಹಾಗೂ ಅಧ್ಯಾಯ 10ರ 69ನೇ ಪ್ರಕರಣದ 5ನೇ ಅಂಶದಲ್ಲಿನ ಅಧಿಕಾರ ಹಾಗೂ ಕರ್ತವ್ಯಗಳ ಅನ್ವಯ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಅಂತಾರಾಷ್ಟ್ರೀಯ ಸ್ತರದ ಪ್ರಾಧ್ಯಾಪಕರೂ ಕನ್ನಡ–ಸಂಸ್ಕೃತ ಭಾಷಾತಜ್ಞರೂ ಆದ ಡಾ. ಎಚ್.ವಿ. ನಾಗರಾಜರಾವ್ ಅವರನ್ನು ಪ್ರತಿ ತಿಂಗಳು ಕಾಲೇಜುಗಳಲ್ಲಿ ವಿಶೇಷೋಪನ್ಯಾಸ ನೀಡುವುದು ಮತ್ತು ವಿಶೇಷ ಅನುವಾದ ಯೋಜನೆಯೊಂದನ್ನು ಪೂರೈಸುವಿಕೆಗೆ ಒಳಪಟ್ಟು ಒಂದು ವರ್ಷದ ಅವಧಿಗೆ ಗೌರವ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಳ್ಳಲಾಗಿತ್ತು. ಅವರಿಗೆ ಪ್ರತೀ ತಿಂಗಳು ರೂ. 15,000/–ಗಳನ್ನು ಗೌರವ ಸಂಭಾವನೆಯಾಗಿ ನೀಡಲಾಗುತ್ತಿದೆ. ಗೌರವ ಸಂದರ್ಶಕ ಪ್ರಾಧ್ಯಾಪಕರ ನೇಮಕಕ್ಕೆ ಸಂಬಂಧಿಸಿದಂತೆ ದಿನಾಂಕ: 2011ರ ಡಿಸೆಂಬರ್ 5ರಂದು ನಡೆದ ಪ್ರಶಾಸನ ಸಮಿತಿ ಮೊದಲ ಸಭೆಯ ವಿಷಯ ಸಂಖ್ಯೆ 8ರಲ್ಲಿ ಘಟನೋತ್ತರ ಅನುಮೋದನೆಯನ್ನು ಪಡೆಯಲಾಗಿದೆ. ವಿದ್ವಾನ್ ಎಚ್.ವಿ. ನಾಗರಾಜರಾವ್ ಅವರ ಅವಧಿಯು ಆಗಸ್ಟ್ 31.08.2012ಕ್ಕೆ ಮುಕ್ತಾಯವಾಗುವ ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ಸ್ತರದ ವಿದ್ವಾಂಸರೂ ಕನ್ನಡ–ಸಂಸ್ಕೃತ ಭಾಷಾತಜ್ಞರೂ ಆದ ಶತಾವಧಾನಿ ಡಾ. ಆರ್. ಗಣೇಶ್ ಅವರನ್ನು ನೇಮಕ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಶತಾವಧಾನಿ ಡಾ. ಆರ್. ಗಣೇಶ್ ಅವರನ್ನು ಗೌರವ ಸಂದರ್ಶಕ ಪ್ರಾಧ್ಯಾಪಕರಾಗಿ ನಿಯುಕ್ತಿಗೊಳಿಸಿದ್ದಕ್ಕಾಗಿ ತನ್ನ ಸಂತೋಷವನ್ನು ವ್ಯಕ್ತಪಡಿಸಿ ಒಂದು ವರ್ಷದ ಅವಧಿಗೆ ಅನುಮೋದಿಸಿತು.**

**ವಿಷಯ 3: ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು, ಉಮ್ಮಚಗಿ (ಕೋಟೆಮನೆ), ಯಲ್ಲಾಪುರ ತಾ., ಉತ್ತರ ಕನ್ನಡ ಜಿಲ್ಲೆ –ಇಲ್ಲಿ ಅನುದಾನ ಸಂಹಿತಾ ನಿಯಮಾನುಸಾರ ಸೃಜನೆಗೊಂಡು ಖಾಲಿ ಇರುವ 8 ಬೋಧಕ ಮತ್ತು 4 ಬೋಧಕೇತರ ಹುದ್ದೆಗಳನ್ನು ತುಂಬಿಕೊಳ್ಳುವ ಬಗೆಗೆ.**

ಟಿಪ್ಪಣಿ: ದಿನಾಂಕ: 28.06.2012ರಂದು ಪ್ರೊ. ಸಿ. ನಂಜುಂಡಯ್ಯ, ಪ್ರಶಿಕ್ಷಣ ಪರಿಷತ್ತಿನ ಸದಸ್ಯರು –ಇವರ ಅಧ್ಯಕ್ಷತೆಯೊಂದಿಗೆ ತ್ರಿಸದಸ್ಯ ಸಮಿತಿ ಸದಸ್ಯರು ಸದರಿ ಸಂಸ್ಥೆಗೆ ಭೇಟಿ ನೀಡಿ ಪರಿಶೀಲನಾ ವರದಿ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ: 06.07.2012ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ) –ಇವರಿಗೆ ವರದಿಯೊಂದಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸಭೆಯ ಅನುಮೋದನೆಗಾಗಿ ವರದಿಯನ್ನು ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿ ಘಟನೋತ್ತರ ಅನುಮೋದನೆ ನೀಡಿತು.**

**ವಿಷಯ 4: ಶ್ರೀ ರಾಜರಾಜೇಶ್ವರೀ ಸಂಸ್ಕೃತ ಕಾಲೇಜು, ಸೋಂದಾ ಸ್ವರ್ಣವಲ್ಲೀ ಮಠ, ಶಿರಸಿ ತಾ., ಉತ್ತರ ಕನ್ನಡ ಜಿಲ್ಲೆ –ಇಲ್ಲಿ ಅನುದಾನ ಸಂಹಿತಾ ನಿಯಮಾನುಸಾರ ಸೃಜನೆಗೊಂಡು ಖಾಲಿ ಇರುವ 9 ಬೋಧಕ ಮತ್ತು 5 ಬೋಧಕೇತರ ಹುದ್ದೆಗಳನ್ನು ತುಂಬಿಕೊಳ್ಳುವ ಬಗೆಗೆ.**

ಟಿಪ್ಪಣಿ: ದಿನಾಂಕ: 25.07.2012ರಂದು ಪ್ರೊ. ಶ್ರೀನಿವಾಸ ವರಖೇಡಿ, ಡೀನ್, ಭಾಷಾ ನಿಕಾಯ –ಇವರ ಅಧ್ಯಕ್ಷತೆಯ ತ್ರಿಸದಸ್ಯ ಸಮಿತಿಯ ಸದಸ್ಯರು ಸದರಿ ಸಂಸ್ಥೆಗೆ ಭೇಟಿ ನೀಡಿ ವರದಿ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ: 01.08.2012ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ) –ಇವರಿಗೆ ವರದಿಯೊಂದಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸಭೆಯ ಅನುಮೋದನೆಗಾಗಿ ವರದಿಯನ್ನು ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿ ಘಟನೋತ್ತರ ಅನುಮೋದನೆ ನೀಡಿತು.**

**ವಿಷಯ 5: ಶ್ರೀ ಸಿದ್ಧಲಿಂಗೇಶ್ವರ ವೇದ–ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು –ಇಲ್ಲಿ ಖಾಲಿ ಇರುವ 7 ಬೋಧಕ ಮತ್ತು 1 ಬೋಧಕೇತರ ಹುದ್ದೆಗಳನ್ನು ತುಂಬಿಕೊಳ್ಳುವ ಬಗೆಗೆ.**

ಟಿಪ್ಪಣಿ: ದಿನಾಂಕ: 29.08.2012ರಂದು ಡಾ. ಟಿ.ಎಸ್. ಸತ್ಯವತಿ, ಪ್ರಶಾಸನ ಸಮಿತಿ ಸದಸ್ಯರು –ಇವರ ಅಧ್ಯಕ್ಷತೆಯ ತ್ರಿಸದಸ್ಯ ಸಮಿತಿಯ ಸದಸ್ಯರು ಸದರಿ ಸಂಸ್ಥೆಗೆ ಭೇಟಿ ನೀಡಿ ವರದಿ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ) –ಇವರಿಗೆ ವರದಿಯೊಂದಿಗೆ ಪ್ರಸ್ತಾವನೆ ಸಲ್ಲಿಸಬೇಕಾಗಿದ್ದು, ಸಭೆಯ ಅನುಮೋದನೆಗಾಗಿ ವರದಿಯನ್ನು ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯೊಡನೆ ಸರ್ಕಾರಕ್ಕೆ ಕಳುಹಿಸಲು ಅನುಮೋದನೆ ನೀಡಿತು.**

**ವಿಷಯ 6: ಶೃತಿ ಶಂಕರ ಸಂಸ್ಕೃತ ಸಂಶೋಧನ ಪ್ರತಿಷ್ಠಾನಂ, ಮತ್ತೂರು, ಶಿವಮೊಗ್ಗ ಜಿಲ್ಲೆ –ಇಲ್ಲಿಗೆ ಮಾನ್ಯತೆ ನೀಡುವ ಬಗೆಗೆ.**

ಟಿಪ್ಪಣಿ: ದಿನಾಂಕ: 25.08.2012ರಂದು ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಪ್ರಶಾಸನ ಸಮಿತಿ ಸದಸ್ಯರು –ಇವರ ಅಧ್ಯಕ್ಷತೆಯ ಸಮಿತಿಯು ಸದರಿ ಸಂಸ್ಥೆಗೆ ಭೇಟಿ ನೀಡಿ ಪರಿಶೀಲನಾ ವರದಿ ಸಲ್ಲಿಸಿರುತ್ತಾರೆ. ಸದರಿ ಸಂಸ್ಥೆಗೆ ಮಾನ್ಯತೆಯನ್ನು ನೀಡಬೇಕಾಗಿದೆ. ಸಭೆಯ ಅನುಮೋದನೆಗಾಗಿ ವರದಿಯನ್ನು ಮಂಡಿಸಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿ ಸರ್ಕಾರದ ಮಾನ್ಯತಾ ಪರಿನಿಯಮವನ್ನು ನಿರೀಕ್ಷಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 7: ಇಂಡೋ–ಯೂರೋಪೀಯ ಶೈಕ್ಷಣಿಕ ಯೋಜನೆಯನ್ನು ಆರಂಭಿಸುವುದರ ಬಗೆಗೆ.**

ಟಿಪ್ಪಣಿ: ಭಾರತಕ್ಕೆ 'ಯೂರೋಪೀಯ ಒಕ್ಕೂಟ'ದ ಪ್ರಾತಿನಿಧಿಕವು (Delegation of European Union to India) ಪ್ರಸ್ತಾವಗಳನ್ನು (proposals) ಸಲ್ಲಿಸಲು ಕರೆ ನೀಡಿದೆ. ಶೈಕ್ಷಣಿಕ ಪುರೋಭಿವೃದ್ಧಿಯ ದೃಷ್ಟಿಯಿಂದಲೂ ಸಾಂಸ್ಕೃತಿಕ ಕ್ರಿಯಾವಿನಿಮಯದ ದೃಷ್ಟಿಯಿಂದಲೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಇದೊಂದು ಸದವಕಾಶವೇ ಆಗಿದೆ. ಆರ್ಥಿಕ ಸಹಾಯವು ಮೇಲಿನ ಅನುದಾನದಿಂದ ಬರುವುದಾಗಿದ್ದು, ಹಲವು ಉಪಯುಕ್ತ ಯೋಜನೆಗಳನ್ನು ವಿಶ್ವವಿದ್ಯಾಲಯವು ಕೈಗೆತ್ತಿಕೊಳ್ಳಬಹುದಾಗಿದೆ. ಅಲ್ಲದೆ, ಬಹುಶಾಸ್ತ್ರೀಯ ಅಧ್ಯಯನಕ್ಕೂ (multi-disciplinary studies) ಈ ಅಂತಾರಾಷ್ಟ್ರೀಯ ಸಹಕಾರವು ಒಂದು ಒಳ್ಳೆಯ ವೇದಿಕೆಯನ್ನು ಕೊಡಬಲ್ಲುದು. ಯೂರೋಪೀಯ ಒಕ್ಕೂಟವೇ ಶೇಕಡಾ 90%ರಷ್ಟು ಅನುದಾನವನ್ನು ಕೊಡುವುದಾಗಿದ್ದು, ವಿಶ್ವವಿದ್ಯಾಲಯವು ಕೇವಲ ಶೇಕಡಾ 10%ರಷ್ಟು ಮಾತ್ರ ಧನವನ್ನು ಒದಗಿಸಬೇಕಾಗುತ್ತದೆ. ಈ ಕಾರ್ಯಕ್ರಮವು ಸುನಿರ್ವಹಣೀಯವೂ ಆಗಿರುತ್ತದೆ. ಸಾಧನ ಸೌಲಭ್ಯ(infrastructure)ಗಳ ಪರಿಷ್ಕರಣವೆಂಬುದೂ ಇದರಿಂದ ಆನುಷಂಗಿಕವಾಗಿ (as a by product) ಸಂಪನ್ನವಾಗುತ್ತದೆ. ಅಂತಾರಾಷ್ಟ್ರೀಯ ಸಂಬಂಧಗಳನ್ನು ವರ್ಧಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವು ಒಂದು ಸಕಾರಾತ್ಮಕವಾದ ಪಾತ್ರವನ್ನು ಹೊಂದಿದೆ. ಪ್ರಕೃತ, ಭಾರತ ಹಾಗೂ ಯೂರೋಪುಗಳ ನಡುವಣ ಸಂಬಂಧಕ್ಕೆ ಇದು ಪೋಷಕವಾಗಿದೆ. ಉದ್ದಿಷ್ಟ ಕಾರ್ಯಕ್ರಮವು ವಿಶ್ವವಿದ್ಯಾಲಯದ ಚಟುವಟಿಕೆಗಳ ವಿಸ್ತರಣಕ್ಕೆ ಅತ್ಯಂತ ಸಹಕಾರಿಯಾಗಿದೆ.

ನಿರ್ಣಯ: **ಸಭೆಯು ಯೋಜನೆಯ ಸಂಬಂಧವಾಗಿ ಸೂಕ್ತ ರೀತಿಯಿಂದ ಮಾನ್ಯ ಕುಲಪತಿಗಳು ಪತ್ರವನ್ನು ಬರೆದು ಕ್ರಮವಹಿಸಲು ಅನುಮೋದಿಸಿತು.**

**ವಿಷಯ 8: ರಾಜ್ಯ ವೇತನಶ್ರೇಣಿಯ ಬೋಧಕ ಹಾಗೂ ಬೋಧಕೇತರ ಹುದ್ದೆಗಳ ಸಂದರ್ಶನ, ಆಯ್ಕೆ ಪ್ರಕ್ರಿಯೆಯ ಬಗೆಗೆ.**

ಟಿಪ್ಪಣಿ: ದಿನಾಂಕ: 16.06.2012ರಂದು ನಡೆದ ಪ್ರಶಾಸನ ಸಮಿತಿ 5ನೇ ಸಭೆಯಲ್ಲಿ ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಗೆ ಅನುಮೋದನೆ ಪಡೆಯಲಾಗಿದೆ. ಅದರಂತೆ ದಿನಾಂಕ: 16.07.2012ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಈ ಆಯ್ಕೆ ಪ್ರಕ್ರಿಯೆಯಲ್ಲಿ 'ಎ', 'ಬಿ' ಮತ್ತು 'ಸಿ' ವರ್ಗದ ವಿವಿಧ ಹುದ್ದೆಗಳಿಗೆ ಸಂದರ್ಶನ ನಡೆಯುವಾಗ ಈ ಕೆಳಕಂಡಂತೆ ಅಂಕಗಳನ್ನು ನಿರ್ದಿಷ್ಟೀಕರಿಸಬೇಕಾಗಿದೆ. ಸಂದರ್ಶನಕ್ಕೆ 10 ಅಂಕಗಳು, ವಿದ್ಯಾರ್ಹತೆಗೆ 10 ಅಂಕಗಳು ಹಾಗೂ ಅನುಭವಕ್ಕೆ 05 ಅಂಕಗಳು ಇರಬೇಕಾಗುತ್ತದೆ. ಒಟ್ಟು 25 ಅಂಕಗಳು 'ಎ', 'ಬಿ' ಮತ್ತು 'ಸಿ' ವರ್ಗದ ವಿವಿಧ ಹುದ್ದೆಗಳಿಗೆ ನಿರ್ದಿಷ್ಟೀಕರಿಸಲು ಹಾಗೂ 'ಡಿ' ವರ್ಗದ ಹುದ್ದೆಗಳಿಗೆ ಸಂದರ್ಶನಕ್ಕೆ 10 ಅಂಕಗಳನ್ನು ಮಾತ್ರ ನಿರ್ದಿಷ್ಟೀಕರಿಸಲು ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:

1. **ಸಭೆಯು ಎಲ್ಲಾ ವಿವರಗಳನ್ನು ಪರಿಶೀಲಿಸಿತು. 'ಎ', 'ಬಿ' ಮತ್ತು 'ಸಿ' ವರ್ಗದ ಹುದ್ದೆಗಳಿಗೆ ಆಯ್ಕೆ ಪ್ರಕ್ರಿಯೆ ಸಂದರ್ಭದಲ್ಲಿ 25 ಅಂಕಗಳಿಗೆ ನಿರ್ದಿಷ್ಟೀಕರಿಸಬಹುದೆಂದೂ 'ಡಿ' ವರ್ಗದ ಹುದ್ದೆಗಳಿಗೆ ಸಂದರ್ಶನಕ್ಕೆ 10 ಅಂಕಗಳನ್ನು ಮಾತ್ರ ನಿರ್ದಿಷ್ಟೀಕರಿಸಲು ನಿರ್ಣಯಿಸಿತು. ಇದರ ಆಧಾರದ ಮೇಲೆ ಹುದ್ದೆಗಳ ಆಯ್ಕೆ ಪ್ರಕ್ರಿಯೆ ನಡೆಸಬಹುದೆಂದು ಸಭೆ ಅನುಮೋದಿಸಿತು.**
2. **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ನೂತನ ವಿಶ್ವವಿದ್ಯಾಲಯವಾಗಿರುವುದರಿಂದ ನೇಮಕಾತಿ ಅಗತ್ಯವಿರುವುದನ್ನು ಸಭೆ ಗಮನಿಸಿತು. ನಿರ್ದಿಷ್ಟ ದಿನಾಂಕದಂದು ಅರ್ಜಿ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳನ್ನೂ ಸಂದರ್ಶನಕ್ಕೆ ಕರೆಯಬಹುದೆಂದು ನಿರ್ಣಯಿಸಲಾಯಿತು.**
3. **ವಿಶ್ವವಿದ್ಯಾಲಯವು ಕರೆಯುವ ಯಾವುದೇ ಬೋಧಕೇತರ ಹುದ್ದೆಗೂ ನಿರ್ದಿಷ್ಟವಾದ ಅನುಭವ ಇಲ್ಲವಾದಾಗ, ಸಮಾನಾಂತರವಾಗಿ ಪಡೆದಿರುವ ಅನುಭವವನ್ನು ಪರಿಗಣಿಸಬಹುದೆಂದು ಸಭೆ ನಿರ್ಣಯಿಸಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು